ಇ.ಪಿ ನಂ.ಃ4/2013
ಪಿಡಬ್ಲ್ಯೂ - 3

ದಿನಾಂಕ 22-11-2019 ರಂದು ಸಾಕ್ಷಿಗೆ ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ಡಿಕ್ರಿಧಾರಕರ ಪರ ಶ್ರೀ ಪಿ.ಕೆ ವಕೀಲರಿಂದ.**

ನಾನು ಶಾಲೆ ಕಲಿತಿಲ್ಲ. ನಮ್ಮ ತಂದೆ ಪೋಲಿಸ ನೌಕರಿ ಮಾಡುತ್ತಿದ್ದ ಆದರೆ ಎಲ್ಲೆಲ್ಲಿ ನೌಕರಿ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಜನ್ಮದಿನಾಂಕ ನನಗೆ ಗೊತ್ತಿಲ್ಲ. ಲಾಡ್ಲೆಸಾಬನ ನನ್ನ ಗೆಳೆಯನಲ್ಲ ನನ್ನ ಮನೆಯ ಬಾಜು ಇರುತ್ತಿದ್ದ. ನನ್ನ ಮನೆ ಜೇವರ್ಗಿಯ ಜ್ಯೋತಿ ಹೊಟೇಲ್ ಬಳಿ ಇದೆ. ನಮ್ಮ ಮನೆ ನಮ್ಮ ತಾಯಿಯಿಂದ ಬಂದಿದೆ. ಲಾಡ್ಲೆಸಾಬನು ಮನೆ ನಂಬರ 12-78 ನ್ನು ಯಾರಿಂದ ಖರೀದಿ ಮಾಡಿದ್ದಾನೆ ಅಥವಾ ಅವನಿಗೆ ಹೇಗೆ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ. ಆ ಮನೆಯನ್ನು ಯಾರು ಕಟ್ಟಿದ್ದಾರೆ ಮತ್ತು ಯಾವ ವರ್ಷದಲ್ಲಿ ಕಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಬಸವರಾಜನು ದೇವೆಂದ್ರಪ್ಪನ ಜ್ಯೋತಿ ಹೊಟೇಲ್‌ನಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ಬಸವರಾಜ ಮತ್ತು ನಾನು ಗೆಳೆಯರಾಗಿದ್ದೇವೆ ಎಂದರೆ ಸರಿ. ಬೇಗಂಬೀ ಮತ್ತು ಲಾಡ್ಲೇಸಾಬನ ಮದುವೆಯ ಸಮಯದಲ್ಲಿ ನಾನು ಚಿಕ್ಕವನು ಅಂದರೆ 14-15 ವರ್ಷದವನಾಗಿದ್ದೆ. ಬೇಗಂಬೀ ಮತ್ತು ಲಾಡ್ಲೆಸಾಬನ ಮದುವೆ ಆದ ಬಗ್ಗೆ ನನಗೆ ಗೊತ್ತಿಲ್ಲ. 1993 ನೇ ಇಸವಿಗಿಂತ ಮೊದಲು ದಾವಾ ಮನೆಯಲ್ಲಿ ಯಾರು ವಾಸ ಮಾಡುತ್ತಿದ್ದರೂ ಎನ್ನುವುದು ನನಗೆ ಗೊತ್ತಿಲ್ಲ. 1993 ರ ನಂತರ ಬೇಗಂಬೀ ದಾವಾ ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ. ಬೇಗಂಬೀ ಹೈದರಾಬಾದನಲ್ಲಿಯೂ ವಾಸ ಮಾಡುತ್ತಾಳೆ. 2013 ನೇ ಇಸವಿಯಲ್ಲಿ ಬೇಗಂಬೀ ದಾವಾ ಮನೆಗೆ ಬಂದಿದ್ದಾಳೆ. 1993 ನೇ ಇಸವಿಯಲ್ಲಿ ಬಸವರಾಜ ದಾವಾ ಮನೆಯಲ್ಲಿ ಇದ್ದ ಎಂದರೆ ನನಗೆ ಗೊತ್ತಿಲ್ಲ. ಬೇಗಂಬೀ ಮತ್ತು ಲಾಡ್ಲೆಸಾಬನ ಮದುವೆಯಾಗಿದೆ ಎಂದು ಮತ್ತು ಬೇಗಂಬೀ ದಾವಾ ಮನೆಗೆ ಬಂದಿದ್ದಾಳೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 3 ನೇ ಅರ್ಜಿದಾರಳ ಮತ್ತು ಬಸವರಾಜನ ಮಾತು ಕೇಳಿಕೊಂಡು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ